# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1537 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ) |
| 3) | ಉತ್ತರಿಸಬೇಕಾದ ದಿನಾಂಕ | 19.12.2025 |
| 4) | ಉತ್ತರಿಸುವವರು | ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಪ್ರಶ್ನೆ | ಉತ್ತರ |
|---|---|
| (ಅ) ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಮಹಿಳಾ ಸ್ವ-ಸಹಾಯ ಗುಂಪುಗಳ ಸಬಲೀಕರಣ ಪ್ರಯುಕ್ತ ರಾಜ್ಯ ಸರ್ಕಾರದಿಂದ ಯಾವ ಯೋಜನೆಗಳನ್ನು ಕಲ್ಪಿಸಲಾಗಿದೆ; (ವಿವರ ನೀಡುವುದು) | ದೀನ್ ದಯಾಳ್ ಅಂತ್ಯೋದಯ ನಗರ ಜೀವನೋಪಾಯ ಅಭಿಯಾನ (DAY-NULM) ವತಿಯಿಂದ ದೀನದಯಾಳ್ ಜನ ಆಜೀವಿಕ ಯೋಜನೆ-ಶಹರಿ ಅಭಿಯಾನದಡಿ ಮಹಿಳಾ ಸ್ವ-ಸಹಾಯ ಗುಂಪುಗಳ ಸಬಲೀಕರಣಕ್ಕಾಗಿ ಈ ಕೆಳಕಂಡ ಯೋಜನೆಗಳನ್ನು ಕಲ್ಪಿಸಲಾಗುತ್ತಿದೆ.<br>• ಮಹಿಳಾ ಸ್ವ-ಸಹಾಯ ಗುಂಪುಗಳ ಮಹಿಳೆಯರು ಉತ್ಪಾದಿಸುವ ಉತ್ಪನ್ನಗಳನ್ನು ಮಾರಾಟ ಮಾಡಲು ಸೂಕ್ತ ಮಾರುಕಟ್ಟೆ ಸೌಲಭ್ಯ ಕಲ್ಪಿಸಲಾಗಿದೆ.<br>• ಅಕ್ಕ ಕೆಫೆ ಮೂಲಕ ಮಹಿಳಾ ಸ್ವಾವಲಂಬನೆ ಹೊಂದಲು ಅವಕಾಶ ಕಲ್ಪಿಸಲಾಗಿರುತ್ತದೆ.<br>• ರಾಷ್ಟ್ರ, ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಆಯೋಜಿಸಲಾಗಿರುವ ಸರಸ್ ಮೇಳಗಳಲ್ಲಿ ಸ್ವ-ಸಹಾಯ ಗುಂಪುಗಳ ಮಹಿಳೆಯರು ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.<br>• ಪಿ.ಎಂ.ಎಫ್.ಎಂ.ಇ ಯೋಜನೆಯಡಿ ಕಿರು ಆಹಾರ ಸಂಸ್ಕರಣೆ ಉದ್ದಿಮೆ ಯೋಜನೆಯಡಿ ಕಿರು ಆಹಾರ ಉದ್ದಿಮೆ ಪ್ರಾರಂಭಿಸಲು ಸಾಲ ಸೌಲಭ್ಯ ಒದಗಿಸಲು ಕೆಪೆಕ್ ಸಂಸ್ಥೆರವರೊಂದಿಗೆ ಅಗತ್ಯ ಸಂಯೋಜನೆ ಮಾಡಲಾಗಿರುತ್ತದೆ.<br>• ನಗರ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಅಮೃತ್ ಮಿತ್ರ ಯೋಜನೆಯಡಿ ಉದ್ಯಾನವನ ನಿರ್ವಹಣೆ ಹಾಗೂ ಗಿಡ ನೆಡುವ ಕಾರ್ಯಕ್ರಮಗಳನ್ನು ಆಯೋಜಿಸಲು ಸ್ವ-ಸಹಾಯ ಗುಂಪುಗಳ ಮಹಿಳೆಯರ ಸೇವೆಯನ್ನು ಬಳಸಿಕೊಳ್ಳಲಾಗಿರುತ್ತದೆ.<br>ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಸ್ವ-ಸಹಾಯ ಗುಂಪುಗಳ ಸದಸ್ಯರನ್ನು ಸಮುದಾಯ ಸಂಚಾಲಕರು (Community Mobiliser) ಹುದ್ದೆಗಳಿಗೆ ಪಡೆದುಕೊಂಡು, ಆರ್ಥಿಕವಾಗಿ ಸಬಲರಾಗಲು ಕ್ರಮ ವಹಿಸಲಾಗಿರುತ್ತದೆ. |

ಸಂಜೀವಿನಿ ಕೆ.ಎಸ್.ಆರ್.ಎಲ್.ಪಿ.ಎಸ್. ವತಿಯಿಂದ ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಮಹಿಳಾ ಸ್ವ-ಸಹಾಯ ಗುಂಪುಗಳ ಸಬಲೀಕರಣಕ್ಕಾಗಿ ರಾಜ್ಯ ಸರ್ಕಾರವು ಈ ಕೆಳಗಿನ ಕೇಂದ್ರ ಪುರಸ್ಕೃತ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1. **ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM)** ರಾಜ್ಯದ 233 ತಾಲ್ಲೂಕುಗಳಲ್ಲಿ ಗ್ರಾಮೀಣ ಮಹಿಳಾ ಬಡತನ ರೇಖೆಯ ಮಹಿಳೆಯರನ್ನು ಸ್ವ-ಸಹಾಯ ಗುಂಪಿನಡಿ ಸಂಘಟಿಸುವ ಮೂಲಕ ಜೀವನೋಪಾಯಕ್ಕಾಗಿ ಸ್ವ-ಉದ್ಯೋಗಗಳನ್ನು ಕಲ್ಪಿಸುವ ಉದ್ದೇಶದಿಂದ ಗ್ರಾಮೀಣ ಭಾಗದ ಎಲ್ಲಾ ಕುಟುಂಬದಿಂದ ಅರ್ಹ ಒರ್ವ ಮಹಿಳೆಯನ್ನು ಸ್ವ-ಸಹಾಯ ಗುಂಪಿಗೆ ಸೇರಿಸಿ ಅವರಿಗೆ ಸುಸ್ಥಿರ ಜೀವನೋಪಾಯ ಉದ್ಯೋಗಗಳನ್ನು ಕಲ್ಪಿಸಲು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

   ಈ ಅಭಿಯಾನದಡಿ ಸ್ವ-ಸಹಾಯ ಗುಂಪುಗಳ ರಚನೆ, ಸ್ವ-ಸಹಾಯ ಗುಂಪುಗಳ ಬಲವರ್ಧನೆ ಹಾಗೂ ವಾರ್ಡ್ ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳನ್ನು ರಚಿಸುವ ಮೂಲಕ ಅವರಿಗೆ ವಿವಿಧ ಸಾಮರ್ಥ್ಯಾಭಿವೃದ್ಧಿ ತರಬೇತಿಗಳನ್ನು ಒದಗಿಸಿ ಜೀವನೋಪಾಯ ಉದ್ಯೋಗಗಳನ್ನು ಕಲ್ಪಿಸಲಾಗುತ್ತಿದೆ.

   ಇದುವರೆಗೂ ರಾಜ್ಯದಲ್ಲಿ 32.09 ಲಕ್ಷ ಮಹಿಳೆಯರನ್ನು 3.04 ಲಕ್ಷ ಸ್ವ-ಸಹಾಯ ಗುಂಪುಗಳಡಿ ಸಂಘಟಿಸಲಾಗಿದೆ. ಕೃಷಿ ಆಧಾರಿತ ಮತ್ತು ಕೃಷಿಯೇತರ ಜೀವನೋಪಾಯ ಉದ್ಯೋಗ ಕೈಗೊಳ್ಳಲು ಸ್ವ-ಸಹಾಯ ಗುಂಪುಗಳಿಗೆ ಸುತ್ತುನಿಧಿ, ಸಮುದಾಯ ಬಂಡವಾಳ ನಿಧಿ ಮತ್ತು ಬ್ಯಾಂಕ್ ಲಿಂಕೇಜ್ ಸೌಲಭ್ಯ ಮುಂತಾದವುಗಳನ್ನು ಒದಗಿಸಲಾಗುತ್ತಿದೆ. ಮುಂದುವರೆದು ಮಹಿಳೆಯರಿಗಾಗಿ ಇತರೆ ಇಲಾಖೆಗಳಡಿ ಲಭ್ಯವಿರುವ ಸೇವಾ ಸೌಲಭ್ಯಗಳನ್ನು ಒಗ್ಗೂಡಿಸುವಿಕೆ ವೇದಿಕೆಯಡಿ ಒದಗಿಸಲಾಗುತ್ತಿದೆ.

2. **ರಾಷ್ಟ್ರೀಯ ಗ್ರಾಮೀಣ ಆರ್ಥಿಕ ಪರಿವರ್ತನಾ ಯೋಜನೆ (NRETP):**
   ಸದರಿ ಕಾರ್ಯಕ್ರಮವನ್ನು ರಾಜ್ಯದ ಉತ್ತರ ಕನ್ನಡ, ಗದಗ ಮತ್ತು ತುಮಕೂರು ಜಿಲ್ಲೆಗಳ ಆಯ್ದ ತಾಲೂಕುಗಳಲ್ಲಿ ಸ್ವ-ಸಹಾಯ ಗುಂಪಿನ ಮಹಿಳೆಯರ ಉದ್ಯಮ ಚಟುವಟಿಕೆಗಳನ್ನು ಬಲವರ್ಧನೆಗೊಳಿಸುವ ಉದ್ದೇಶದಿಂದ ಅನುಷ್ಠಾನಗೊಳಿಸಲಾಗಿತ್ತು. ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಸದರಿ ಯೋಜನೆಯನ್ನು ಜೂನ್ 2025 ರಿಂದ ಸ್ಥಗಿತಗೊಳಿಸಿರುತ್ತವೆ.

3. **ಆರಂಭಿಕ ಗ್ರಾಮೀಣ ಉದ್ಯಮ ಕಾರ್ಯಕ್ರಮ (SVEP):** ಗ್ರಾಮೀಣ ಮಹಿಳೆಯರು ಕೈಗೊಂಡಿರುವ ಉದ್ಯಮ ಆಧಾರಿತ ಚಟುವಟಿಕೆಗಳನ್ನು ಮೇಲ್ದರ್ಜೆಗೇರಿಸಲು ಸೂಕ್ತ ತರಬೇತಿ ಹಾಗೂ ಇತರೆ ಪೂರಕ ವ್ಯವಸ್ಥೆ, ಉದ್ಯಮ ಬಂಡವಾಳ ನಿಧಿ ಒದಗಿಸುವ ಉದ್ದೇಶದಿಂದ ರಾಜ್ಯದಲ್ಲಿ ಪ್ರಸ್ತುತ 4 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮವು 4 ವರ್ಷದ ಅವಧಿಯನ್ನು ಹೊಂದಿದ್ದು, ಪ್ರತಿ ತಾಲ್ಲೂಕಿನಲ್ಲಿಯೂ ಮಹಿಳೆಯರು ಉದ್ಯಮ ಚಟುವಟಿಕೆ ಕೈಗೊಳ್ಳಲು ಬೆಂಬಲಿಸಲಾಗುತ್ತಿದೆ.

4. **ಮಹಿಳಾ ಸಶಕ್ತೀಕರಣ ಪರಿ ಯೋಜನಾ-ಸಮಗ್ರ ಕೃಷಿ ಸಮೂಹ (MKSP-IFC):** ರಾಜ್ಯದ 30 ಜಿಲ್ಲೆಗಳ (ಬೆಂಗಳೂರು ನಗರ ಹೊರತುಪಡಿಸಿ) ಪ್ರತಿ ತಾಲ್ಲೂಕಿಗೆ ಸರಾಸರಿ 3 ಕ್ಲಸ್ಟರ್‌ಗಳಂತೆ 682 ಕ್ಲಸ್ಟರ್‌ಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಯಡಿ ಮಹಿಳೆಯರಿಗೆ ಉತ್ಪಾದನೆ, ಸಂಸ್ಕರಣೆ ಮತ್ತು ಮೌಲ್ಯವರ್ಧನೆ, ವ್ಯಾಪಾರ ಯೋಜನಾ ತಯಾರಿಕೆ ಮುಂತಾದ ಚಟುವಟಿಕೆಗಳಿಗೆ ತರಬೇತಿ ನೀಡಿ ಬೆಂಬಲಿಸಲಾಗುತ್ತಿದೆ.

5. **ನಾರಿ ಕರ್ನಾಟಕ ಸಮಗ್ರ ಜೀವನೋಪಾಯ ಯೋಜನೆ-(NARI-KILP):** ರಾಜ್ಯದಲ್ಲಿ 2024-25ನೇ ಸಾಲಿನಿಂದ ಪ್ರಸ್ತುತ ಸ್ವ-ಸಹಾಯ ಗುಂಪುಗಳಿಂದ ಹಾಗೂ ಸರ್ಕಾರದ ಸೇವಾ ಸೌಲಭ್ಯಗಳಿಂದ ಹೊರಗುಳಿದ ಅತೀ ದುರ್ಬಲ ಕುಟುಂಬಗಳನ್ನು ಗುರುತಿಸಿ, ಅವರನ್ನು ಸ್ವ-ಸಹಾಯ ಗುಂಪಿನ ಸದಸ್ಯರನ್ನಾಗಿ ಅಭಿಯಾನದ ವ್ಯಾಪ್ತಿಗೆ ತರುವುದು ಮತ್ತು ಮೂಲ ಅವಶ್ಯಕ ದಾಖಲೆಗಳು ಸೇರಿದಂತೆ ಅರ್ಹತೆಗನುಗುಣವಾಗಿ ಸರ್ಕಾರದ ಸೇವಾ-ಸೌಲಭ್ಯಗಳು, ಸುಸ್ಥಿರ ಜೀವನೋಪಾಯ ಚಟುವಟಿಕೆಗಳನ್ನು ದೊರಕಿಸಿಕೊಡುವ ಉದ್ದೇಶದಿಂದ ಜಾರಿಗೊಳಿಸಲಾಗುತ್ತಿರುವ ವಿಶೇಷ ಯೋಜನೆಯಾಗಿದೆ. ಸದರಿ ಯೋಜನೆಯನ್ನು ರಾಜ್ಯದ ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳು ಮತ್ತು ಬಾಗಲಕೋಟೆ, ವಿಜಯಪುರ, ಚಾಮರಾಜನಗರ ಜಿಲ್ಲೆಗಳಲ್ಲಿ ತಲಾ 2 ತಾಲ್ಲೂಕುಗಳಂತೆ ಒಟ್ಟು 20 ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸುತ್ತಿದೆ.

6. **ಸ್ತ್ರೀ ಸಾಮರ್ಥ್ಯ:** 2022-23ನೇ ಸಾಲಿನ ಆಯವ್ಯಯ ಘೋಷಣೆಯಂತೆ ಆಯ್ದ ಸ್ವ-ಸಹಾಯ ಸಂಘಗಳಿಗೆ ಆರ್ಥಿಕ ಬಲವರ್ಧನೆಗೆ ಹಾಗೂ ಉದ್ಯಮಶೀಲತೆಯನ್ನು ಮತ್ತಷ್ಟು ವೃದ್ಧಿಗೊಳಿಸಲು ರೂ.100.00 ಕೋಟಿ ಶೇ.100 ರಷ್ಟು ರಾಜ್ಯ ಸರ್ಕಾರದ ಅನುದಾನದಡಿ ರಾಜ್ಯದಲ್ಲಿ ಸ್ತ್ರೀ ಸಾಮರ್ಥ್ಯ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿತ್ತು. ಸದರಿ ಯೋಜನೆಯನ್ನು ಆಯ್ದ ಉತ್ಪನ್ನಗಳಡಿ ಮಹಿಳೆಯರನ್ನು ಉದ್ಯಮ ಚಟುವಟಿಕೆಯಡಿ ತೊಡಗಿಸಲು ಸೂಕ್ತ

| | |
|---|---|
| | ತರಬೇತಿಗಳನ್ನು ಹಾಗೂ ವಿಶೇಷ ಸಮುದಾಯ ಬಂಡವಾಳ ನಿಧಿಯನ್ನು ಒದಗಿಸಲಾಗಿದೆ. |
| (ಆ) ರಾಜ್ಯದ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದಿಂದ ಎಷ್ಟು ಮೊತ್ತದ ಅನುದಾನವನ್ನು ಒದಗಿಸಲಾಗಿದೆ; (ವಿವರ ನೀಡುವುದು) | ಡೇ-ಎನ್.ಯು.ಎಲ್.ಎಂ ಅಭಿಯಾನದಡಿ ದಿನಾಂಕ: 01.04.2022 ರಿಂದ 08.12.2025ರವರೆಗೆ ಒಟ್ಟು 24,656 ಸ್ವ-ಸಹಾಯ ಗುಂಪುಗಳು ರಚಿಸಲ್ಪಟ್ಟಿದ್ದು, ಈ ಪೈಕಿ 14,086 ಸ್ವ-ಸಹಾಯ ಗುಂಪುಗಳಿಗೆ ತಲಾ ರೂ.10,000/-ರಂತೆ ಒಟ್ಟು ರೂ. 14.08 ಕೋಟಿ ಆವರ್ತಕ ನಿಧಿ ಹಾಗೂ 541 ಪ್ರದೇಶ ಮಟ್ಟದ ಒಕ್ಕೂಟಗಳಿಗೆ ತಲಾ ರೂ.50,000/- ರಂತೆ ರೂ.2.70 ಕೋಟಿ ಸೇರಿ ಒಟ್ಟು ರೂ.16.78 ಕೋಟಿಗಳಷ್ಟು ಆವರ್ತಕ ನಿಧಿಯನ್ನು ಒದಗಿಸಲಾಗಿರುತ್ತದೆ.<br><br>ಸಂಜೀವಿನಿ ಕೆ.ಎಸ್.ಆರ್.ಎಲ್.ಪಿ.ಎಸ್. ವತಿಯಿಂದ ರಾಜ್ಯದಲ್ಲಿ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಅನುಷ್ಠಾನಗೊಳಿಸಲಾಗುತ್ತಿರುವ ಕಾರ್ಯಕ್ರಮಗಳಡಿ ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದಿಂದ ಒದಗಿಸಲಾದ ಅನುದಾನದ ವಿವರವನ್ನು **ಅನುಬಂಧ**ದಲ್ಲಿ ನೀಡಿದೆ. |
| (ಇ) ರಾಜ್ಯದ ಮಹಿಳಾ ಸ್ವ-ಸಹಾಯ ಗುಂಪುಗಳ ಸ್ಥಿತಿಗತಿಗಳ ಕುರಿತು ಮೌಲ್ಯಮಾಪನ ಸಮೀಕ್ಷೆಯನ್ನು ನಡೆಸಲಾಗಿದೆಯೇ; ಇಲ್ಲದಿದ್ದಲ್ಲಿ, ನಡೆಸಲು ಚಿಂತಿಸಲಾಗಿದೆಯೇ? (ವಿವರ ನೀಡುವುದು) | ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಂಜೀವಿನಿ ಕೆ.ಎಸ್.ಆರ್.ಎಲ್.ಪಿ.ಎಸ್. ನ ರಾಜ್ಯದ ಮಹಿಳಾ ಸ್ವ-ಸಹಾಯ ಗುಂಪುಗಳ ಸ್ಥಿತಿಗತಿಗಳ ಕುರಿತು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಕರ್ನಾಟಕ ಸರ್ಕಾರ ರವರ ಮೂಲಕ ಈ ಕೆಳಗಿನ ಮೌಲ್ಯಮಾಪನ ಅಧ್ಯಯನವನ್ನು ಕೈಗೊಳ್ಳಲಾಗಿದ್ದು, ಡಿಸೆಂಬರ್, 2021 ರಲ್ಲಿ ಪ್ರಕಟಿಸಲಾಗಿದೆ.<br><br>ಮುಂದುವರೆದು, 2025-26ನೇ ಸಾಲಿನಲ್ಲಿ ರಾಜ್ಯದಲ್ಲಿ ಗ್ರಾಮೀಣ ಜೀವನೋಪಾಯ ಅಭಿಯಾನದ ಅಡಿಯಲ್ಲಿ ಸ್ವಸಹಾಯ ಗುಂಪುಗಳ ಸ್ಥಿತಿಗತಿಗಳ ಕುರಿತು ಈ ಕೆಳಗಿನ 2 ಅಧ್ಯಯನವನ್ನು ಕರ್ನಾಟಕ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಪ್ರಾಧಿಕಾರದ ಮೂಲಕ ಕೈಗೊಳ್ಳಲಾಗಿರುತ್ತದೆ.<br><br>1. ಡೇ-ಎನ್‌ಆರ್‌ಎಲ್‌ಎಂ ನಡಿ ಕರ್ನಾಟಕದಲ್ಲಿನ ಕಾರ್ಯಕ್ರಮದಡಿ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳ ಮೌಲ್ಯಮಾಪನ.<br>2. ಡೇ-ಎನ್‌ಆರ್‌ಎಲ್‌ಎಂ ಕಾರ್ಯಕ್ರಮದಡಿ ಸಮುದಾಯ ಬಂಡವಾಳ ನಿಧಿ ಮೌಲ್ಯಮಾಪನ. |

**ಸಂಖ್ಯೆ: ಕೌಉಜೀಇ 34 ಕೌಗುಪ್ರ 2025**

**(ಡಾ. ಶರಣಪ್ರಕಾಶ ಆರ್ ಪಾಟೀಲ್)**
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ
ಸಚಿವರು.

## ಅನುಬಂಧ

ಸಂಜೀವಿನಿ-ಕೆ.ಎಸ್.ಆರ್.ಎಲ್.ಪಿ.ಎಸ್‌ನಡಿ ಅನುಷ್ಠಾನ ಗೊಳಿಸಲಾಗುತ್ತಿರುವ ಈ ಕೆಳಗಿನ ಕಾರ್ಯಕ್ರಮಗಳಡಿ ಕಳೆದ 3 ವರ್ಷಗಳಲ್ಲಿ ವರ್ಷವಾರು ಬಿಡುಗಡೆಯಾದ ಅನುದಾನದ ವಿವರ.

(ರೂ.ಕೋಟಿಗಳಲ್ಲಿ)

| ಕ್ರ. ಸಂ | ಕಾರ್ಯಕ್ರಮ | 2022-23 | | | 2023-24 | | | 2024-25 | | |
|---|---|---|---|---|---|---|---|---|---|---|
| | | ಕೇಂದ್ರ | ರಾಜ್ಯ | ಒಟ್ಟು | ಕೇಂದ್ರ | ರಾಜ್ಯ | ಒಟ್ಟು | ಕೇಂದ್ರ | ರಾಜ್ಯ | ಒಟ್ಟು |
| 1 | ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM) 60:40 | 195.516 | 130.344 | 325.86 | 407.34 | 271.56 | 678.9 | 298.728 | 199.152 | 497.88 |
| 2 | ರಾಷ್ಟ್ರೀಯ ಗ್ರಾಮೀಣ ಆರ್ಥಿಕ ಪರಿವರ್ತನೆ ಯೋಜನೆ (NRETP) 60:40 | 21.312 | 14.208 | 35.52 | 11.724 | 7.816 | 19.54 | 7.32 | 4.88 | 12.2 |
| 3 | ಆರಂಭಿಕ ಗ್ರಾಮೀಣ ಉದ್ಯಮ ಕಾರ್ಯಕ್ರಮ (SVEP) 60:40 | 0.98 | 0.66 | 1.64 | 7.81 | 5.2 | 13.01 | 0 | 0 | 0 |
| 4 | ಮಹಿಳಾ ಸಶಕ್ತೀಕರಣ ಪರಿಯೋಜನೆ-ಸಮಗ್ರ ಕೃಷಿ ಸಮೂಹ (MKSP-IFC) 60:40 | 0 | 0 | 0 | 9.6 | 6.4 | 16 | 0 | 0 | 0 |
| 5 | ಸ್ತ್ರೀ ಸಾಮರ್ಥ್ಯ ಯೋಜನೆ (ಶೇಕಡಾ 100 ರಾಜ್ಯದ ಅನುದಾನ) | | 100 | 100 | | | | | | |
| ಒಟ್ಟು | | 217.808 | 245.212 | 463.02 | 436.47 | 290.98 | 727.5 | 306.048 | 204.032 | 510.08 |

(ಸುರೇಶ್ ಡಿ.ಸಿ)
ಶಾಖಾಧಿಕಾರಿ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ